ಹಣಕಾಸಿನ ಸಂಸ್ಥೆಯವರ ನಿಗಮದ ನಷ್ಟವನ್ನು ಸರಿಪಡಿಸಲು ಬಡ್ಡಿಯ ದರವನ್ನು ಶೇ.14ರಿಂದ ಶೇ. 11 ರಷ್ಟಕ್ಕೆ ದಿನಾಂಕ : 1-4-1985 ರಿಂದ 31-3-1992 ರವರೆಗೆ ಕಡಿಮೆ ಮಾಡಿರುತ್ತಾರೆ. ಅದೂ ಅಲ್ಲದೆ ಹಣಕಾಸಿನ ಸಂಸ್ಥೆಯವರು ದಿನಾಂಕ : 1-4-1985ರಿಂದ 31-12-1991ರವರೆಗೆ ಬಾಕಿಯಿರುವ ಬಡ್ಡಿಯ ಮೇಲೆ ಶೇ. 11 ರಂತೆ ಲೆಕ್ಕ ಮಾಡಿ ಅದರ ಮೇಲೆ ಶೇ. 8 ರಷ್ಟು ಚಕ್ರಬಡ್ಡಿ ವಿಧಿಸಿರುತ್ತಾರೆ. ಸರ್ಕಾರವು ಮೇಲ್ಕಂಡ ಪುನಃ ಶ್ಚೇತನದ ಅಂಗವಾಗಿ ಈಗಾಗಲೇ 300.00 ಲಕ್ಷ ರೂಪಾಯಿಗಳನ್ನು ಹಣಕಾಸಿನ ಸಂಸ್ಥೆಗಳಿಗೆ ಪಾವತಿ ಮಾಡಿರುತ್ತದೆ.

ಈಗ ಸಂಸ್ಥೆಯ ಕೆಲಸ ನಿರ್ವಹಣೆಯು ಉತ್ತಮಗೊಂಡಿದ್ದು ನಷ್ಟ ಪ್ರಮಾಣವನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ. ಹಿಂದಿನ ನಷ್ಟದ ಪ್ರಮಾಣವನ್ನು ಆದಷ್ಟು ಬೇಗ ಕಡಿಮೆಗೊಳಿಸಿ ಸಂಸ್ಥೆಯು ಲಾಭದತ್ತ ಮುನ್ನಡೆಯಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.

ಕೆ.ಎಸ್.ಎಂ.ಬಿ. ಬೆಲೆಯಲ್ಲಿ ವಿಪರೀತ ವಿರಿಳಿತವನ್ನು ತಡೆಯಲು ಹಾಗೂ ರೈತರ, ನೂಲು ಬಿಚ್ಚುವವರ ಮತ್ತು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಹಿತದೃಷ್ಟಿಯಿಂದ ರೇಷ್ಮೆ ನೂಲಿಗೆ ಕನಿಷ್ಟ ಬೆಲೆ ನಿಗಧಿಪಡಿಸುವ ವಿಷಯ ಸರ್ಕಾರ ನಿರ್ಧರಿಸಿದೆ.

ಊ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ- ಇಲ್ಲ-

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ - ಇಲ್ಲ -

ನೇಸರ್ಗಿಯಲ್ಲಿ ಸರ್ಕಾರಿ ಐ.ಟಿ.ಐ. ಪ್ರಾರಂಭಿಸುವ ಬಗ್ಗೆ.

639 Ë ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೈಸರ್ಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು;

ಆ) ಸಾರ್ವಜನಿಕರು ಕಟ್ಟಡವನ್ನು ಒದಗಿಸಲು ಮುಂದೆ ಬಂದಿದ್ದರೂ ಕೂಡ ಇದುವರೆಗೂ ಆ ಕಾಲೇಜನ್ನು ಏಕೆ ಪ್ರಾರಂಭಿಸಿರುವುದಿಲ್ಲ;

ಇ) ಮಲೆನಾಡ ಅಭಿವೃದ್ಧಿ ಯೋಜನೆಯಲ್ಲಿ ಆ ಕೆಲಸಕ್ಕೆ ಹಣ ಒದಗಿಸಲು ಸಾಧ್ಯವಾಗದೇ ಇರುವುದರಿಂದ ಶಿಕ್ಷಣ ಇಲಾಖೆಯವರು ಹಣ ಒದಗಿಸಿ ಆ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಆ ರೀತಿ ಆಶ್ವಾಸನೆ ನೀಡಿಲ್ಲ ಆದರೂ ಇದನ್ನು ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ) ಪರಿಶೀಲಿಸಲಾಗುವುದು.

ಮುಲ್ಕಿಗೆ ಕುಡಿಯುವ ನೀರು ಸರಬರಾಜು ಯೋಜನೆ

568 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿಯ ಕುಡಿಯುವ ನೀರಿನ ಪೂರೈಕೆ ಬಗ್ಗೆ ಸರ್ಕಾರ ಏನು ಯೋಜನೆ ಕೈಗೊಂಡಿದೆ.

ಆ) ಅದಕ್ಕೆ ಅಂದಾಜು ಎಷ್ಟು ಖರ್ಚು ತಗಲುವುದು.